ತೂಕಡಿಕೆ ಮಾಡುತ್ತಾ, ಧಿಗ್ಗನೆದ್ದು ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳ ಬಡಬಡಿಸುತ್ತಿದ್ದರು. ರಾತ್ರಿ ಡ್ಯೂಟಿ ಮಾಡುವ ಡ್ರೈವರಿಗೆ ಯಾರಾದರೊಬ್ಬರು ಮಾತಾಡಿಸುತ್ತಲೇ ಇರಬೇಕು ಎಂಬ ಮೂಢನಂಬಿಕೆಗೆ ಜೋತುಬಿದ್ದವರ ರೀತಿ. 'ನನಗದರ ಅಗತ್ಯವಿಲ್ಲ ಮುಚ್ಕೊಂಡು ಮಲಗ್ರಿ' ಎಂದರೂ ಅವರು ನನ್ನ ಮಾತು ನಂಬಲು ಸಿದ್ಧರಿರಲಿಲ್ಲ. ಕಾಟಾಚಾರಕ್ಕಾದರೂ ಏನಾದರೂ ಮಾತಾಡುತ್ತಿದ್ದರು.

ನಾವು ಕಷ್ಟಬಿದ್ದು ಅಂತೂ ಬೆಳಗಿನ ಜಾವ ಐದಕ್ಕೆ ಹೋಗಿ ತಲುಪಿದೆವು. ಮಳೆಯಲ್ಲಿ ನಮಗಾಗಿ ನಿರ್ಜನ ಪ್ರದೇಶದಲ್ಲಿ ಕಾಯುತ್ತಿದ್ದ ಆತ ನಮ್ಮನ್ನು ಕಾಡಿನ ನಡುವೆ ಇದ್ದ ಮನೆಗೆ ಕರೆದುಕೊಂಡು ಹೋದ. ಅವನ ಈ ನಿಷ್ಠೆಯೇ ನಮಗಿಷ್ಟವಾಯಿತು. 'ಸ್ವಲ್ಪ ನಿದ್ದೆ ಮಾಡಿ. ಸಿಕ್ಕಾಪಟ್ಟೆ ಮೋಡ ಕವಿದಿರುವ ಕಾರಣ ಬೆಳಕು ಮೂಡುವುದು ತಡವಾಗುತ್ತೆ' ಎಂದ. ಸಣ್ಣ ನಿದ್ರೆ ತೆಗೆಯಲು ಅವಕಾಶ ಸಿಕ್ಕಿದ್ದೇ ತಡ ಧಡಧಡ ಎಂದು ಅಲ್ಲಲ್ಲೇ ಕ್ಷಣಮಾತ್ರದಲ್ಲೇ ಮೂರ್ಛೆಬಿದ್ದವರಂತೆ ಪಾಚಿಕೊಂಡೆವು.

* * *

ಆತ ಸಣ್ಣ ಗುಡ್ಡವನ್ನು ಹತ್ತಿಸಿ ಇಕ್ಕಟ್ಟಿನ ಜಾಗೆಯಲ್ಲಿ ಹುಶಾರಾಗಿ ಇಳಿಯಲು ಹೇಳಿದ. ಕೊಂಚ ಬೆಳೆದ ಗಿಡಗಳ ಸವರಿ ಕಷ್ಟಪಟ್ಟು ಆತ ದಾರಿ ಮಾಡಿದ್ದ. ಕೆಳಗೆ ಇಳಿದರೆ ಸುರಂಗದಂತೆ ಕಾಣುವ ಚೂಪು ಬಂಡೆಯ ಜಾಗ ಕಾಣುತ್ತಿತ್ತು. ಅದರ ಕೆಳಗೆ ಗುಡ್ಡದ ಮೇಲಿಂದ ಬಿದ್ದ ಮಳೆ ನೀರು ಆಳವಾಗಿ ನಿಂತಿತ್ತು. ಮನುಷ್ಯರ್‍ಯಾರೂ ಓಡಾಡದ, ಯಾರೂ ಸುಲಭವಾಗಿ ಗುರುತಿಸಲು ಸಾಧ್ಯವಾಗದಿರುವ ರಹಸ್ಯ ಸ್ಥಳವದು. ಅಂತಲ್ಲಿ ಈ ಹಕ್ಕಿ ಗೂಡು ಕಟ್ಟಿತ್ತು. ನುಣುಪು ಬಂಡೆಗಳ ಮೇಲೆ ಬೆಳೆದ ಪಾಚಿ ಮೇಲೆ ಕಾಲಿಟ್ಟು ಆಯತಪ್ಪಿ ಜಾರಿ ಬಿದ್ದರೆ ಮೂಳೆ ಆಯ್ದುಕೊಂಡು ಬರಬೇಕು ಅಂತಹ ಯಾತನೆಯ ಜಾಗೆಯದು. ಜೊತೆಗೆ ಧೋ ಎಂದು ಸೆಡ್ಡು ಹೊಡೆದು ಸುರಿವ ವರ್ಷಧಾರೆ.

ಇಂತಹ ಅಪರಿಚಿತ ಸ್ಥಳದಲ್ಲಿ, ಅರಿಯದ ಕಾಡಿನಲ್ಲಿ ನಾವು ಹೋಗಿ ಇದರ ವಾಸಸ್ಥಾನ ಹುಡುಕುವುದು ಸಾಧ್ಯವೇ ಇಲ್ಲದ ಮಾತು. ನಾವು ನೆಟ್ಟಗೆ ನಿಲ್ಲಲೂ ಆಗದ ಗುಂಡಿ ಗೊಟರೆಗಳ ಜಾಗದಲ್ಲಿ ಈ ಪಕ್ಷಿಗಳು ಬೇಕಂತಲೆ ಮನೆ ಕಟ್ಟುತ್ತವೆ. ಈ ಸ್ಥಳಗಳನ್ನು ಕಷ್ಟಬಿದ್ದು ಹುಡುಕಿ ಎಲ್ಲೋ ಇರುವ ನಮ್ಮನ್ನು ಕರೆದು ಫೋಟೊ ಮಾಡಿಸುವ ಅನೇಕ ಜನ ಇಲ್ಲಿ ಇದ್ದಾರೆ. ಇದು ಇವರ ಹೊಟ್ಟೆಪಾಡು ಕೂಡ ಹೌದು. ಈ ಕೆಲಸಕ್ಕಾಗಿ ಅವರು ಅನೇಕ ತಿಂಗಳು ಕಾಡಿನ ಮೂಲೆ ಮೂಲೆ ಸುತ್ತಿರುತ್ತಾರೆ. ತುಂಬಾ ಸಮಯ ಹಾಕಿರುತ್ತಾರೆ. ಇದಕ್ಕೆ ವಿಶೇಷ ಪರಿಶ್ರಮ, ಸೂಕ್ಷ್ಮತೆ ಮತ್ತು ದೊಡ್ಡ ಮಟ್ಟದ ಹುಚ್ಚುತನಗಳು ಇರಬೇಕು.

ನಮಗೆ ಸಿಕ್ಕ ತರುಣನ ಹೆಸರು ಪ್ರವೀಣ ಸಂತೋಸ್ಕರ್. ನಗುಮೊಗದ ಆಪ್ತತೆಯ ಹುಡುಗ. ಅಂತರಜಾತಿ ಮದುವೆಯಾಗಿ ಮನೆಯಿಂದ ಹೊರ ದೂಡಲ್ಪಟ್ಟು ಸಂಕಷ್ಟದಲ್ಲಿರುವ ಯುವಪ್ರೇಮಿ. ಇವನ ಹೆತ್ತವರೇ ಇವನಿಗೆ ಆ ಊರಲ್ಲಿ ಎಲ್ಲೂ ಯಾವ ಕೆಲಸವೂ ಸಿಗದಂತೆ ಮಾಡಿಟ್ಟಿದ್ದರು. ತನ್ನ ಜೀವನೋಪಾಯಕ್ಕೆ ಈ ಯುವಕ ಹಕ್ಕಿಯ ತಾಣಗಳ ಹುಶಾರಾಗಿ ಹುಡುಕಿ ಫೋಟೊಗ್ರಾಫರ್‌ಗಳ ಕರೆಸಿ ಪಟ ಮಾಡಿಸುವ ಹೊಸ ಕೆಲಸ ಶುರು ಮಾಡಿಕೊಂಡಿದ್ದ. ಬಾಲ್ಯದಿಂದ ಬೆಳೆಸಿಕೊಂಡಿದ್ದ ಹಕ್ಕಿಗಳ ವೀಕ್ಷಣೆಯ ಹವ್ಯಾಸ ಈಗ ಬದುಕು ಕಟ್ಟಿಕೊಳ್ಳಲು ಆಸರೆ ಕೊಟ್ಟಿತ್ತು. 'ನನಗೆ ಅನ್ನ ಕೊಡುತ್ತಿರುವ ದೇವರುಗಳು ಇವು ಸರ್' ಎಂದು ಭಾವುಕವಾಗಿ ಅತ್ತುಬಿಟ್ಟ. ಆತನಿಗೆ ಹೆಚ್ಚು ಕಡಿಮೆ ನಾವೇ ಮೊದಲ ಗಿರಾಕಿಗಳಾಗಿದ್ದೆವು. ಕತ್ತಲ ಕೋಪವೇ ಆಗಿದ್ದ ಬಂಡೆಗಳ ಸಂಧಿಯ ಒಳಗೆ ಮಣ್ಣು ಕೊರೆದು ತನ್ನ ಕನಸಿನ ಹಕ್ಕಿ ಗೂಡು ಮಾಡಿತ್ತು.

